INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,38-51
Peer Reviewed Journal, Referred Journal

# ಕರ್ನಾಟಕ ರಾಜ್ಯದ ಪ್ರಮುಖ ಚಾರಿತ್ರಿಕ ಸ್ಮಾರಕ ಸ್ಥಳಗಳು: ಒಂದು ಮೌಲ್ಯಮಾಪನ

**ಡಾ.ಬಿ.ಸಿ.ಸುರೇಶ.**[1]

ಕರ್ನಾಟಕ ರಾಜ್ಯದಲ್ಲಿ ಅನೇಕ ಸ್ಮಾರಕಗಳಿವೆ. ಅದರಲ್ಲಿ ಪ್ರಧಾನವಾದವುಗಳನ್ನು ಮಾತ್ರ ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿರುತ್ತದೆ. ಅವುಗಳೆಂದರೆ; ಸನ್ನತಿ, ಐಹೊಳೆ, ಬಾದಾಮಿ, ಪಟ್ಟದಕಲ್ಲು ಮತ್ತು ಹಂಪಿ. ಇವುಗಳಿಗೆ ಸಂಬಂಧಿಸಿದ ವಿಚಾರಧಾರೆಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ. ಸನ್ನತಿಯು ಕರ್ನಾಟಕ ರಾಜ್ಯದಲ್ಲಿನ ಕಲಬುರಗಿಯ ಚಿತ್ತಾಪುರಾ ತಾಲ್ಲೂಕಿನಲ್ಲಿರುವ ಅತ್ಯಂತ ವಿಸ್ತೃತವೂ ಕುತೂಹಲಕರವೂ ಆದ ಬೌದ್ಧ ನಿವೇಶನವೇ ಆಗಿರುತ್ತದೆ. ಇದು ಕೃಷ್ಣೆಯ ಉಪನದಿ ಭೀಮಾನದಿಯ ಎಡದಂಡೆ ಮೇಲಿದೆ. ಯಾದಗೀರ್‌ನಿಂದ ಸು.50 ಕಿಮೀ ದೂರದಲ್ಲಿ ಹಾಗೂ ನಾಲ್ವರ್ ರೈಲ್ವೆ ನಿಲ್ದಾಣದಿಂದ (ಮಧ್ಯ–ದಕ್ಷಿಣ ರೈಲ್ವೆ) 19.ಕಿ.ಮೀ.ದೂರದಲ್ಲಿದೆ. ಶಾಕ್ತ ಪಂಥದ ದೇವಿಯರಲ್ಲಿ ಒಬ್ಬಳಾದ ಚಂದ್ರಲಾಂಬೆಯ ದೇವಾಲಯವಿರುವುದರಿಂದ ಇದು ಅನೇಕ ಭಕ್ತರನ್ನು ಆರ್ಕಷಿಸುವ ಬೌದ್ಧರ ಒಂದು ಪ್ರಮುಖ ಯಾತ್ರಾಸ್ಥಳವೂ ಕೂಡ ಆಗಿದೆ. ಈ ದೇವಿಯನ್ನು ಚಂಡಾಲ ಪರಮೇಶ್ವರಿ ಎಂದು ಕರೆಯಲಾಗುತ್ತದೆ.

ಸ್ಥಳಪುರಾಣ ಮತ್ತು ಐತಿಹ್ಯದಂತೆ ಪುರಾಣ ಪ್ರಸಿದ್ಧರಾದ ರಾಮ, ಸೀತೆಯರು, ನಾರಾಯಣ, ಚಂದ್ರವದೆಯರಾಗಿ ಅವತರಿಸಿದ್ದಾಗ ಈ ಪ್ರದೇಶವನ್ನು ಆಳುತ್ತಿದ್ದ ಸೇತು (ಶ್ವೇತರಾಜ) ಎಂಬ ದೊರೆ ಚಂದ್ರವದೆಯನ್ನು ಬಲಾತ್ಕರಿಸಿ ಆಕೆಯಿಂದ ಶಾಪ ಪಡೆದನೆಂದೂ ಮುಂದೆ ಈಕೆಯೇ ಚಂದ್ರಲಾ ಪರಮೇಶ್ವರಿ ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಿರುವಳೆಂದೂ ತಿಳಿದುಬರುತ್ತದೆ. ಸನ್ನತಿಯ ಬಳಿ ಇರುವ ಕೋಟೆಯನ್ನು ಈ ಹಿನ್ನೆಲೆಯಲ್ಲಿ ಸೇತುರಾಜನಕಟ್ಟೆ ಎಂಬ ಹೆಸರಿನಿಂದ ಗುರುತಿಸುವುದು ಗಮನಾರ್ಹ. ಈ ಸೇತುರಾಜನಕಟ್ಟೆ ಶಾತವಾಹನರ ಕೋಟೆ ಎನ್ನುವುದರ ಅಪಭ್ರಂಶ ರೂಪವಾಗಿದ್ದಿರಬೇಕು.

ಪುರಾತತ್ತ್ವದ ಶೋಧನೆಗಳು ಈ ನೀವೆಶನವನ್ನು ಪತ್ತೆ ಮಾಡಿ ಇದರ ಮಹತ್ತ್ವವನ್ನು ಮೊದಲ ಬಾರಿಗೆ ಪ್ರಸ್ತಾಪಿಸಿದವರು ಕಪಟರಾಳು ಕೃಷ್ಣರಾಯ, ಮೈಸೂರು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ ಎಂ.ಶೇಷಾದ್ರಿ ಅವರು ಈ ಸ್ಥಳದಲ್ಲಿ ಹೆಚ್ಚಿನ ಪರಿಶೋಧನೆ ನಡೆಸಿ 1964–65ರಲ್ಲಿ ಇಲ್ಲಿನ ಶಿಲ್ಪ, ಶಾಸನಗಳನ್ನು ಕುರಿತಂತೆ ಸವಿವರವಾಗಿಯೇ ತಮ್ಮ ಲೇಖನವನ್ನು ದಾಖಲಿಸಿದ್ದಾರೆ.

[1]. **ಇತಿಹಾಸ ಸಹಾಯಕ ಪ್ರಾಧ್ಯಾಪಕ, ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು**

ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಪಿ.ಬಿ ದೇಸಾಯಿ ಅವರು ಮತ್ತೊಮ್ಮೆ ಸನ್ನತಿಯಲ್ಲಿ ಸ್ಥಳ ಪರಿಶೋಧನೆ ಮಾಡಿ ಫೆಬ್ರವರಿ 1966 ರಂದು ಇದು ಕರ್ನಾಟಕ ರಾಜ್ಯದ ಅತ್ಯಂತ ಮಹತ್ತ್ವಪೂರ್ಣ ಹಾಗೂ ಅತಿದೊಡ್ಡ ಬೌದ್ಧ ನಿವೇಶನವೆಂದು ಕೂಡ ಅಭಿಪ್ರಾಯವನ್ನು ಪಟ್ಟಿದ್ದಾರೆ. ಸನ್ನತಿಯಿಂದ ಕನಗನಹಳ್ಳಿಯವರೆಗಿನ ಸರಿಸುಮಾರು 5–6 ಚದರ ಕಿ.ಮೀ ಪ್ರದೇಶದಲ್ಲಿ ಸಾತವಾಹನ ಹಾಗೂ ಅದಕ್ಕೂ ಹಿಂದಿನ ಕಾಲದ ಸಾಂಸ್ಕೃತಿಕ ಹಾಗೂ ವಾಸ್ತು ನಿರ್ಮಿತಗಳ ಬೃಹತ್ ಅವಶೇಷಗಳು, ಶಿಲ್ಪ ಫಲಕಗಳು, ಪುರಾತನ ಕಾಲದ ಹೆಂಚು, ಇಟ್ಟಿಗೆ, ಆಟಿಕೆ ಮುಂತಾದ ಮಣ್ಣೂರ್ತಿ, ಬೌದ್ಧಲಯಗಳ ಶಿಲ್ಪಾಲಂಕೃತ ವಸ್ತುಭಾಗಗಳು ಆಂಧ್ರ ಸಾತವಾಹನ ಕಾಲದ ಹೊಳಪುಳ್ಳ ಕಪ್ಪು ಕೆಂಪು ಮಣ್ಪಾತ್ರೆ, ಸ್ಫಟಿಕ, ಕಾರ್ನೇಲಿಯನ್‌ಗಳಂತಹವು ಅರೆ ಪ್ರಶಸ್ತ ಶಿಲೆಯ ಮಣಿಗಳು, ಶಂಕದ ಆಭರಣಗಳು ಆದಿ ಇತಿಹಾಸ ಯುಗದ ಜನವಸತಿಯ ಕುರುಹುಗಳು ಕಂಡುಬಂದಿವೆ. ಈ ಫಲಕಗಳ ಮೇಲೆ ಬುದ್ಧನ ಜೀವನದ ಪ್ರಮುಖ ಘಟನೆ, ಜಾತಕ ಕಥೆ, ಸಾಮಾಜಿಕ ಜನಜೀವನ ಮತ್ತು ಗೃಹಸ್ಥ ಜೀವನದ ಕೆಲವು ರಸಮಯ ಸನ್ನಿವೇಸಗಳ ಮನೋಜ್ಞ ಚಿತ್ರಣವನ್ನು ಕಾಣಬಹುದು. ಇದುವರೆಗೆ ಸನ್ನತಿಯಲ್ಲಿ 250ಕ್ಕೂ ಹೆಚ್ಚು ಕಿರು ಶಾಸನಗಳು ದೊರೆತುವೆ. ಅವುಗಳಲ್ಲಿ 241 ಬ್ರಾಹ್ಮಿಲಿಪಿಯಲ್ಲಿರುವ (ಧಾನದ ಉಲ್ಲೇಖವಿರುವ) ತುಂಡು ಶಾಸನಗಳೂ ಉಳಿದವು ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ ಕಾಲದವು ಆಗಿವೆ. ಲಿಪಿ, ಭಾಷೆ ಮತ್ತು ಶಿಲ್ಪಶೈಲಿ, ವಸ್ತು ಹಾಗೂ ತಂತ್ರವನ್ನೊಳಗೊಂಡಂತೆ ಈ ಶಿಲ್ಪ ಶಾಸನಗಳು ಕ್ರಿ.ಪೂ. 1ನೆಯ ಶತಮಾನದಿಂದ ಕ್ರಿ.ಪೂ 3ನೆಯ ಶತಮಾನದವರೆಗಿನ, ಅಮರಾವತಿಯ ಇಂಥದೆ ಶಿಲ್ಪ ಶಾಸನಗಳನ್ನು ಹೋಲುತ್ತವೆ.

ಸ್ತೂಪ ದಿಬ್ಬಗಳು ಸಂಬಂಧಿಸಿದಂತೆ ಚರ್ಚಿಸಿದಾಗ; ಎರಡು ದಿಬ್ಬಗಳು ಇಲ್ಲಿರುವುದು ಹೆಚ್ಚು ಗಮನಾರ್ಹವಾಗಿದೆ. ಇವುಗಳಲ್ಲಿ ಒಂದು ಚಂದ್ರಲಾ ಪರಮೇಶ್ವರಿ ದೇವಾಲಯದ ಸಮೀಪದಲ್ಲಿದ್ದು ಸಾಕಷ್ಟು ಸುಸ್ಥಿತಿಯಲ್ಲಿದೆ. ಈ ದಿಬ್ಬದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆಯ ಹೈದರಾಬಾದ್ ವಲಯ ದಕ್ಷಿಣ ಏಷ್ಯಾ ಅಧ್ಯಯನ ಸಂಸ್ಥೆಯ ಜೇಮ್ಸ್ ಹೊವೆಲ್ಲರ ಸಹಯೋಗದೊಂದಿಗೆ ವೈಜ್ಞಾನಿಕವಾಗಿ ಉತ್ಖನನ ಕೈಗೊಂಡಿದೆ. ಇದಲ್ಲದೆ ರಾಜ್ಯ ಸರ್ಕಾರದ ಪ್ರಾಚ್ಯ ವಸ್ತು ನಿರ್ದೇಶನಾಲಯವು ಸನ್ನತಿ ಕೋಟೆಯ ಬಳಿ ಉತ್ಖನನ ಕೈಗೊಂಡು ಸಾತವಾಹನ ಹಾಗೂ ತತ್ಪೂರ್ವ ಕಾಲದ ಜನವಸತಿ, ಅವರ ಸಮೃದ್ಧ ಸಾಂಸ್ಕೃತಿಕ ಜೀವನ ಅವರ ಪದ್ಧತಿ ಇವುಗಳ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲಂತಹ ಅನೇಕ ಮಾಹಿತಿಗಳನ್ನು ಒದಗಿಸಿತು. ಇದು ಸರಿಸುಮಾರು ೮೦ ಹೆಕ್ಟೇರ್ ಪ್ರದೇಶವನ್ನು ಸುತ್ತುವರೆದ 4 ಮೀ. ಎತ್ತರದ. ೩. ಮೀ ಅಗಲದ ಕೋಟೆಯ ಗೋಡೆಯನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. (46ಥ21ಥ೦ ಸೆ.ಮೀ). ಈ ಕೋಟೆಯ ಪ್ರದೇಶದಲ್ಲಿ ರಾಜ ಪ್ರಮುಖರ ಹಾಗೂ ಜನಸಾಮನ್ಯರ ಎರಡು ಪ್ರತ್ಯೇಕ ವಸತಿ ನೆಲೆಗಳನ್ನು ಗುರುತಿಸಲಾಗಿದೆ.

ದೇವಿಯ ಮಂದಿರವು ಚಂದ್ರಲಾ ಪರಮೇಶ್ವರಿ ಬಹುಶಃ ಬೌದ್ಧಧಮ್ಮದ ಪ್ರಭಾವ ಕ್ಷೀಣಿಸಿದ ಮೇಲೆ ಬಾದಾಮಿ ಚಾಳುಕ್ಯ, ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದಂತೆ ಕಂಡುಬರುತ್ತದೆ. ಮುಂದೆ ಅನೇಕ ಬಾರಿ ಪುನರ್ ನಿರ್ಮಾಣಗೊಂಂಡಿದ್ದರು ಮೂಲ ಗರ್ಭಗೃಹದ ಧ್ವಾರಬಂಧಗಳು ಕೆಲವಾದರೂ ವಾಸ್ತು ಭಾಗಗಳಲ್ಲಿ ರಾಷ್ಟ್ರಕೂಟ ಶೈಲಿಯ ಕೇಲವು ಲಕ್ಷಣಗಳನ್ನು ಗುರುತಿಸಬಹುದು.

ಅಶೋಕನ ಶಾಸನ ಮತ್ತು ಕನಗನಹಳ್ಳಿಯ ಮಹಾಸ್ತೂಪದ ಶಾಸನಗಳೂ ಸೇರಿದಂತೆ ಇದುವರೆಗೆ ಸು.350ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. ಇತರ ಸ್ತೂಪ ಮತ್ತು ವಿಹಾರ ನಿವೇಶನಗಳಲ್ಲಿ ಉತ್ಖನನ ನಡೆದರೆ ಇನ್ನಷ್ಟು ಶಾಸನಗಳು ದೊರೆಯುವ ಸಾಧ್ಯತೆಯು ಇದೆ. ಈಗಾಗಲೇ ಈ ಪ್ರದೇಶದಲ್ಲಿ 1995ರವರೆಗಿನ ದೊರಗಿದ್ದ ಅಶೋಕ, ಶಾತವಾಹನ ದೊರೆಗಳು ಹಾಗೂ ಇತರರ ಸುಮಾರು 85 ಶಾಸನಗಳನ್ನು ಐ.ಕೆ ಶರ್ಮ ಪ್ರಕಟಿಸಿದ್ದಾರೆ. ಸ್ತೂಪದ ಉತ್ಖನನ ವರದಿಯಲ್ಲಿಯೂ ಸುಮಾರು 250 ಶಾಸನಗಳು ಪ್ರಕಟವಾಗುವ ನಿರೀಕ್ಷೆ ಇದೆ. ಕಂದು ಬಣ್ಣದ ಕಣ ಶಿಲೆಯ (ಗ್ರಾನೈಟ್) ಈ ಶಿಲಾಖಂಡ ಸುಮಾರು 30 ಸೆ.ಮೀ ದಪ್ಪವಾಗಿದ್ದು ಆಯತಾಕಾರದಲ್ಲಿದೆ. (2.33–1.21 ಮೀ). ಪಾರ್ಶ್ವಗಳನ್ನು ಒರಟಾಗಿ ಕತ್ತರಿಸಿ, ಮಧ್ಯದಲ್ಲಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ಅನುವಾಗುವಂತೆ ಆಯತಾಕಾರದ ರಂಧ್ರವನ್ನು ಕೊರೆದಿದ್ದಾರೆ. ಈ ಫಲಕ ಬಂಡೆಯೊಂದರ ಭಾಗವಾಗಿರದೆ ಎರಡೂ ಮುಖಗಳಲ್ಲಿ ಅಶೋಕನ ಶಾಸನವಿರುವ ಆಯತಾಕಾರದ ಫಲಕವಿದೆ. ಈ ಪ್ರಕಾರದ ಅಶೋಕನ ಶಿಲಾಶಾಸನ ಇಡೀ ಭಾರತದಲ್ಲಿಯೇ ಮೊದಲ ಬಾರಿಗೆ ಸನ್ನತಿಯಲ್ಲಿ ಕಂಡುಬಂದಿದೆ. ಮುಂಭಾಗದ 9ನೆಯ ಪಂಕ್ತಿಯಲ್ಲಿ ಧರ್ಮದ ಉಲ್ಲೇಖವಿರುವುದರಿಂದ ಇವು ಅಶೋಕನ ಶಾಸನಗಳೆಂದು ಸುಸ್ಪಷ್ಟವಾಗುತ್ತದೆ. ಹೊಸದಾಗಿ ದೊರೆತಿರುವ ಶಾಸನಗಳ ಪ್ರಾಮುಖ್ಯ ಈ ಫಲಕದಲ್ಲಿಯ 12 ಮತ್ತು 4ನೆಯ ಮುಖ್ಯ ಶಿಲಾಶಾಸನಗಳ ಆಧಾರದ ಮೇಲೆ ಭೀಮಾನದಿಯ ದಡದಲ್ಲಿರುವ ಕಲಬುರಗಿ ಜಿಲ್ಲೆಯ ಪ್ರದೇಶಗಳು ಅಶೋಕನ ಸಾಮ್ರಾಜ್ಯದ ಒಂದು ಭಾಗವಾಗಿತೆಂದೂ ಈ ಭಾಗದ ಆಡಳಿತಾಧಿಕಾರಿಯಾಗಿ ಮಹಾಮಾತ್ರನೊಬ್ಬನು ನಿಯುಕ್ತನಾಗಿದ್ದನೆಂದೂ ಹೇಳಬಹುದು.

**ಐಹೊಳೆ**

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನಲ್ಲಿರುವ ಬಾದಾಮಿಯ ಚಾಳುಕ್ಯರ ಕಾಲದ ಸುಂದರ ದೇವಾಲಯ ಸಮೂಹಗಳಿಂದ ಪ್ರಾಚೀನ ವಾಸ್ತುಶಿಲ್ಪ ಕಲಾ ಕೇಂದ್ರವೆಂದು ಪ್ರಪಂಚ ಪ್ರಸಿದ್ಧವಾಗಿರುವ ಗ್ರಾಮ,ಪ್ರವಾಸಿಕೇಂದ್ರ. ಹುನಗುಂದದಿಂದ 26 ಕಿ.ಮೀ ಪಶ್ಚಿಮಕ್ಕೆ ಮಲಪ್ರಭಾ ನದಿಯ ಬಲದಂಡೆಯ ಮೇಲಿದೆ. ಬಾಗಲಕೋಟೆಯಿಂದ ಅಮೀನಗಡದ ಮೂಲಕ (ಸು.50ಕಿ.ಮೀ) ಅಥವಾ ಬಾದಾಮಿಯಿಂದ ಪಟ್ಟದಕಲ್ಲಿನ ಮೂಲಕ (ಸು.30ಕಿ.ಮೀ) ಐಹೊಳೆಯನ್ನು ತಲುಪಲು ರಸ್ತೆ ಸಾರಿಗೆ ಸೌಕರ್ಯವಿದೆ. ಇಲ್ಲೊಂದು ಪ್ರವಾಸಿ ಮಂದಿರ, ಕೇಂದ್ರ ಪುರಾತತ್ವ ಇಲಾಖೆಯ ಒಂದು

ಕಾರ್ಯಾಲಯ ಸಹ ಇದೆ. ಅಯ್ಯಾವೊಳೆ, ಆರ್ಯಪುರ ಇವು ಶಾಸನಗಳಲ್ಲಿ ಕಂಡುಬರುವ ಈ ಊರಿನ ಹೆಸರುಗಳು. ಈ ಗ್ರಾಮದಲ್ಲಿಯ ರಾಚಿ ಗುಡಿಯ ಬಳಿ ಮಲಪ್ರಭಾ ನದಿ ಪಾತ್ರದಲ್ಲಿ ಹಾದಿ ಹಳೆಶಿಲಾಯುಗದ ಕೊಡಲಿ, ಬಾಚಿಯಂತಹ ಉಪಕರಣಗಳು ದೊರೆಯುತ್ತವೆ. ಇಲ್ಲಿಯ ಒಂದು ಸಮತಟ್ಟ ಗುಡ್ಡದ ಮೇಲಿರುವ ಸ್ಥಳೀಯವಾಗಿ ಮೇಗುಡಿ ಎಂದು ಕರೆಯಲಾದ ಚಾಳುಕ್ಯ ಅರಸು ಮನೆತನದ 2ನೆಯ ಪುಲಕೇಶಿಯ ಆಸ್ಥಾನ ಜೈನ ಕವಿ ರವಿಕೀರ್ತಿ ಕಟ್ಟಿಸಿದ ಜೀನಾಲಯದ ಬಲಬದಿಯ ಸಮತಟ್ಟನಲ್ಲಿ ಆದಿ ಕಬ್ಬಿಣ ಯುಗದ ನಾನಾ ರೀತಿಯಲ್ಲಿ ಹಾಳುಬಿದ್ದಿರುವ ಸು.30 ಕಂಡಿ ಕೋಣೆ ಗೋರಿಗಳಿವೆ. ಹಾಗೆಯೇ ಮುಂದುವರೆದು ಗುಡ್ಡದಂಚಿನ ಬಯಲಿನಲ್ಲಿ ಹಲವಾರು ದಾರಿಕೋಣೆ ಗೋರಿಗಳಿವೆ. ಹೀಗೆ, 2 ಪ್ರಮುಖ ಮಾದರಿಗಳ ಬೃಹತ್ ಶಿಲಾಗೋರಿಗಳಿರುವ ಇದೊಂದು ಅಪರೂಪದ ನೆಲೆ. ಈ ಗುಡ್ಡದ ಉತ್ತರದಂಚಿನಲ್ಲಿರುವ 2 ಕಲ್ಲಾಸರೆಗಳಲ್ಲಿ 1ರಲ್ಲಿ ಅರ್ಧಂಬರ್ಧ ಉಳಿದಿರುವ ಮೈ ಮೇಲೆ ರೇಖಾ ವಿನ್ಯಾಸವುಳ್ಳ ಪಂದು ಪ್ರಾಣಿಯ ಕಾವಿ ಬಣ್ಣದ ಚಿತ್ರ ಸ್ವಲ್ಪ ಮುಂದಕ್ಕೆ 2ನೆಯದರಲ್ಲಿ ಬಿಳಿ ವರ್ಣದ ಒಂದು ರೇಖಾಚಿತ್ರಗಳಿವೆ. ಕೆಳಗೆ ಬಯಲು ಪ್ರದೇಶದಲ್ಲಿ ಆದಿ ಇತಿಹಾಸ ಕಾಲದ ಜನವಾಸ್ತವ್ಯದ ಮಡಿಕೆ ಚೂರುಗಳು ದೊರೆಯುತ್ತವೆ. ಊರೊಳಗೆ ಲಾಡ್‌ಖಾನ್ ಗುಡಿಯ ಸುತ್ತಮುತ್ತಲ ಪ್ರದೇಶದ ಹಾಳ ಮಣ್ಣಿನಲ್ಲೂ ಒಂದು ಸಾತವಾಹನರ ಕಾಲದ ನಾಣ್ಯವೂ ಸಿಕ್ಕಿದೆ.

ಐಹೊಳೆ ಚರಿತ್ರೆಯ ಒಂದು ಕಾಲದಲ್ಲಿ ದೊಡ್ಡ ಪಟ್ಟಣ. ಇಲ್ಲಿಯ ಅವಶೇಷಗಳ ಅವಗಹಾನೆಯಿಂದ ಪ್ರ.ಶ.ಪೂ ಸು.8–6ನೆಯ ಶತಮಾನದ ಹೊತ್ತಿಗೆ ಕಬ್ಬಿಣದ ಯುಗದಲ್ಲೇ ಇಲ್ಲಿ ಜನವಸತಿ ಇದ್ದಿರಬೇಕೆನಿಸುತ್ತದೆ. ಗ್ರಾಮದ ಸಮೀಪದಲ್ಲಿರುವ ಮೇಗುತಿ ಗುಡ್ಡದ ಮೇಲೆ ಒಂದು ಹೆಕ್ಟೇರ್‌ನಷ್ಟು ಹರಹಿನ ಪ್ರದೇಶದಲ್ಲಿ ಮೋರೇರ ಅಂಗಡಿಗಳು ಎಂದು ಕರೆಯಲಾದ ಬೃಹತ್ ಶಿಲಾ ಸಮಾಧಿಗಳು ಕಂಡುಬಂದಿವೆ. ಇವು ನಾಲ್ಕು ನೇರ ಚಪ್ಪಡಿಯನ್ನು ಪೆಟ್ಟಿಗೆ ಆಕೃತಿಯಲ್ಲಿ ಜೋಡಿಸಿ ಮೆಲೊಂದು ಚಪ್ಪಡಿಯಿಂದ ಮುಚ್ಚಿರುವ ಸಮಾಧಿಗಳು (ಡಾಲ್ಮೇನ್). ಇಲ್ಲಿಯ ಅಂಬಿಗೇರ ಗುಡಿ, ಹುಚ್ಚಪ್ಪಯ್ಯ ಮಠ ಇತ್ಯಾದಿಗಳ ಸಮೀಪದಲ್ಲಿ ಇತ್ತೀಚಿಗೆ ನಡೆಸಿದ ಅಗೆತಗಳಿಂದ ಕಂಡುಬಂದ ದೊಡ್ಡ ಪ್ರಮಾಣದ ಇಟ್ಟಿಗೆಗಳಿಂದ ಕಟ್ಟಿದ ಕಟ್ಟಟಗಳ ಅಡಿಪಾಯಗಳು, ಮಡಕೆಗಳು ಇತ್ಯಾದಿಗಳಿಂದ ಚಾಳುಕ್ಯ ಪೂರ್ವಕಾಲದಲ್ಲೂ ಇಲ್ಲಿ ಕಟ್ಟಡಗಳಿದ್ದವೆಂದು ತಿಳಿಯುತ್ತದೆ.

6–7ನೆಯ ಶತಮಾನಗಳ ಹೊತ್ತಿಗೆ ಬಾದಾಮಿಯ ಚಾಳುಕ್ಯರ ಆಳ್ವಿಕೆಯ ಪ್ರಾರಂಭದಲ್ಲಿ ಐಹೊಳೆ ದೊಡ್ಡ ಪಟ್ಟಣವಾಗಿ ಬೆಳೆಯಲಾರಂಭಿಸಿತು. 7–8ನೆಯ ಶತಮಾನಗಳು ಈ ಪಟ್ಟಣದ ವೈಭವದ ಕಾಲ. ಬಹುಪಾಲು ದೇವಾಲಯಗಳು ಹುಟ್ಟಿಕೊಂಡದ್ದು ಈ ಕಾಲದಲ್ಲಿಯೇ. ಇಲ್ಲಿಯ ಅತೀ ಪ್ರಾಚೀನ ಶಾಸನಗಳು ಸು.6–7ನೆಯ ಶಾತಮಾನದವು. 8ನೆಯ ಶತಮಾನದಲ್ಲಿ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡವು. ಚಾಳುಕ್ಯ ರಾಜ್ಯ ಕೊನೆಗೊಂಡಾಗ ಐಹೊಳೆಯ ವೈಭವವೂ

ಇಳಿಮುಖವಾದಂತೆ ತೋರಿದರೂ ಮುಂದೆ ಕಲ್ಯಾಣದ ಚಾಳುಕ್ಯಕರ ರಾಜ್ಯ ಅಂತ್ಯದವರಗೆ ಈ ನಗರ ಸ್ವಲ್ಪ ಮಟ್ಟಿಗಾದರೂ ಚಟುವಟಿಕೆಗಳ ಕೇಂದ್ರವಾಗಿ ಮುಂದುವರಿಯಿತು. ರಾಷ್ಟಕೂಟರ ಮತ್ತು ಕಲ್ಯಾಣದ ಚಾಳುಕ್ಯರ ಕಾಲದಲ್ಲೂ ಕೇಲವು ಶಾಸನಗಳು ಮತ್ತು ದೇವಾಲಯಗಳು ಹುಟ್ಟಿಕೊಂಡವು. ಆದರೆ ಬಾದಾಮಿಯ ಚಾಳುಕ್ಯ ಕಾಲಕ್ಕೆ ಹೋಲಿಸಿದರೆ ಇವುಗಳ ಸಂಖ್ಯೆ ಕಡಿಮೆ. ಸ್ವರೂಪ, ವೈವಿಧ್ಯದಲ್ಲಿ ಸಹಾ ಅವು ಸಾಮಾನ್ಯ ದರ್ಜೆಯವು. 1169-70ರ ಒಂದು ಶಾಸನ ಐಹೊಳೆಯಲ್ಲಿ ದೊರಕಿರುವ ಕೊನೆಯ ಶಾಸನ. ತದನಂತರ ಉತ್ತರ ಕರ್ನಾಟಕದಲ್ಲಿ ಉಂಟಾದ ಸಾಮಾಜಿಕ, ರಾಜಕೀಯ ಆಂದೋಲನದಿಂದಾಗಿ ಈ ಪ್ರಾಚೀನ ಪಟ್ಟಣ ತನ್ನ ಪ್ರಮುಖ್ಯವನ್ನು ಪೂರ್ಣವಾಗಿ ಕಳೆದುಕೊಂಡಂತೆ ತೋರುತ್ತದೆ. ಐಹೊಳೆ ತನ್ನ ವೈಭವದ ಕಾಲದಲ್ಲಿ ವಿದ್ವಾಂಸರಿಂದ ತುಂಬಿದ್ದ ಊರಾಗಿತ್ತು. ಪ್ರಾಯಶಃ ಇದೊಂದು ಅಗ್ರಹಾರ. 8-17ನೆಯ ಶತಮಾನದವರೆಗೆ ದಕ್ಷಿಣ ಭಾರತದಾದ್ಯಂತ ಪ್ರಸಿದ್ಧವಾಗಿದ್ದ ವರ್ತಕ ಸಂಘವೊಂದು ಅಯ್ಯಾವೊಳೆ ಐನೂರ್ವರು ಎಂಬ ಹೆಸರಿನಿಂದ ಮೆರೆಯುತ್ತಿತ್ತು.

**ವಾಸ್ತುಶಿಲ್ಪ**:

ಐಹೊಳೆಯಲ್ಲಿ ಸು.125 ದೇವಾಲಯಗಳಿವೆ. ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಇವನ್ನು 22 ಗುಂಪುಗಳಾಗಿ ವಿಂಗಡಿಸಿದ್ದಾರೆ. 1 ಹುಚ್ಚಿಮಲ್ಲಿ, 2 ಚಿಕ್ಕೀ, 3 ಅಂಬಿಗೇರ, 4 ದುರ್ಗ, 5 ಗೌಡರ, ಲಡಾಖಾನ್ ಮತ್ತು ಸೂರ್ಯ ನಾರಯಣ, 6 ಚಕ್ರ ಮತ್ತು ಬಡಿಗೇರ, 7 ರಾಚಿ, 8 ಏಣಿಯರ್, 9 ಹುಚ್ಚಪಯ್ಯ ಮಠ, 10 ಕುಂತಿ, 11 ಚರಂತಿ ಮಠ, 12 ತ್ರಯ್ಯಂಬಕೇಶ್ವರ, 13 ಗೌರಿ, 14 ಜೈನ, 15 ಮಲ್ಲಿಕಾರ್ಜುನ, 16 ಗುಡ್ಡದಮೇಲಿನ ಜೈನ, 17 ಮೇಗುತಿ, 18 ಜ್ಯೋತಿರ್ಲಿಂಗ, 19 ರಾವಳ ಫಡಿ, 20 ಹುಚ್ಚಪ್ಪಯ್ಯ, 21 ಗಳಗನಾಥ ಮತ್ತು 22 ರಾಮಲಿಂಗ. ಈ ದೇವಾಲಯ ಗುಂಪುಗಳು ಐಹೊಳೆ ಗ್ರಾಮದಲ್ಲಿರುವ ಕೋಟೆಯ ಆವರಣದ ಒಳಗೆ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹರಡಿಕೊಂಡಿವೆ. ಈ ಮುಂದೆ ಕೋಟೆ ಮತ್ತು ಕೇಲವು ಮುಖ್ಯ ದೇವಾಲಯಗಳನ್ನು ವಿವರಿಸಲಾಗಿದೆ.

**ಬಾದಾಮಿ**

ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ ಹಾಗೂ ಪ್ರಮುಖ್ಯ ಪಟ್ಟಣ, ಇತಿಹಾಸ ಪ್ರಸಿದ್ಧ ಸ್ಥಳ, ಬಿಜಾಪುರದಿಂದ 113ಕಿಮೀ ದಕ್ಷಿಣದಲ್ಲಿ ಹುಬ್ಬಳ್ಳಿ-ಸೊಲ್ಲಾಪುರ ರೈಲು ಮಾರ್ಗದಲ್ಲಿದೆ. ಬಾದಾಮಿ ಪಟ್ಟಣದ ಸನ್ನಿವೇಶ ಬಹು ಸುಂದರವಾದುದು. ನಸುಗೆಂಪು ಮರಳುಕಲ್ಲಿನ ಗುಡ್ಡದ ಗಜಪೃಷ್ಠಾಕಾರದ ಕಣಿವೆಯ ಮಧ್ಯದಲ್ಲಿ ಇರುವ ಅಗಸ್ಯ ಸರೋವರ ಎಂಬ ವಿಶಾಲವಾದ ಕೆರೆಯ ಪಶ್ಚಿಮ ಭಾಗದಲ್ಲಿ ಈ ಪಟ್ಟಣ ಹಬ್ಬಿದೆ. ಹಿಂದೆ ಇದಕ್ಕೆ ವಾತಾಪಿ ಎಂಬ ಹೆಸರೂ ಇತ್ತೆಂದು ಸ್ಥಳೀಯ ಪ್ರತೀತಿ. ಸರಿಸುಮಾರು 6-8ನೆಯ ಶತಮಾನಗಳಲ್ಲಿ ಕರ್ನಾಟಕದ ಹೆಮ್ಮೆಯ ಸಾಮ್ರಾಜ್ಯವಾಗಿ ಮೆರೆದ

ಚಾಳುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಆ ಕಾಲದಲ್ಲಿ ಕಗ್ಗಲ್ಲಿನಲ್ಲಿ ಕೊರೆದಿರುವ ಮತ್ತು ಕಟ್ಟಿದ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳು ಇಂದಿಗೂ ಉಳಿದು ಬಂದಿದ್ದು ಪ್ರೇಕ್ಷಣೀಯ ಸ್ಥಳವಾಗಿದೆ.

ಚಾಳುಕ್ಯರ ಕಾಲಕ್ಕೂ ಪೂರ್ವದಲ್ಲಿ ಇದು ಬಹುಶಃ ಒಂದು ಸುಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಗ್ರೀಕ್ ಭೂಗೋಳಕಾರ ಟಾಲಮಿ (ಸು.150) ತನ್ನ ಪುಸ್ತಕದಲ್ಲಿ ಬಾದಾಮಿಯನ್ನೂ ಕೂಡ ಉಲ್ಲೇಖಿಸಿದ್ದಾನೆ. ಇದನ್ನು ಒಪ್ಪುವ ಹಾಗೆ ಸರೋವರದ ಉತ್ತರ ಬದಿಯ ಗುಡ್ಡದ ಇಕ್ಕಟ್ಟಿನ ಸಂಧಿಗಳಲ್ಲಿ ಇತಿಹಾಸದ ಪ್ರಾರಂಭಕಾಲದ (ಪ್ರಶ.ಪೂ.3ನೆಯ ಶತಮಾನ) ಮಣ್ಣಿನ ಪಾತ್ರೆಗಳ ಚೂರುಗಳೂ ಮತ್ತು ಆ ಕಾಲದ ಅಥವಾ ಸ್ವಲ್ಪ ಅನಂತರ ಕಾಲದ ಕಟ್ಟಡಗಳ ಅವಶೇಷಗಳೂ ದೊರಕಿವೆ. ಚಾಳುಕ್ಯ ಚಕ್ರವರ್ತಿ ಒಂದನೆಯ ಪುಲಕೇಶಿ ಇಲ್ಲಿ ಮೊದಲು ಕೋಟೆ ಕಟ್ಟುವಾಗಲೇ ಇದು ದೊಡ್ಡ ಪಟ್ಟಣವಾಗಿರಬೇಕು. ಏಕೆಂದರೆ ಇವನ ಶಾಸನದಲ್ಲಿ ಈ ಊರನ್ನು ವಾತಾಪ್ಯಧಿಷ್ಠಾನವೆಂದು ವರ್ಣಿಸಲಾಗಿದೆ. ಅಧಿಷ್ಠಾನವು ರಾಜಧಾನಿ ಎಂಬ ಅರ್ಥವಷ್ಟೇ ಅಲ್ಲದೆ ದೊಡ್ಡ ಪಟ್ಟಣವೆಂದೂ ಆಗುವುದು.

ಬಾದಾಮಿಯ ಉತ್ತರ ಗುಡ್ಡದ ಬದಿಯಲ್ಲಿ ವಿಶಾಲ ಬಯಲಿದ್ದು, ಅದು ಗುಡ್ಡದ ಸಾಲಿನಲ್ಲಿ ಕೆಲವು ಗವಿಗಳಿವೆ. ನಾಲ್ಕು ಗವಿಗಳಲ್ಲಿ ವರ್ಣಚಿತ್ರಗಳಿವೆ. ಅವುಗಳು ಎರಡು ಪ್ರಾಗೈತಿಹಾಸಿಕ ಕಾಲದ್ದು. ಒಂದರಲ್ಲಿ ಮುಸಿಯದ ರೇಖಾ ಚಿತ್ರವಿದ್ದು ಮತ್ತು ವಿಚಿತ್ರ ಪ್ರಾಣಿಯ ಮತ್ತು ಭೂತ ಸ್ವರೂಪದ ಮನುಷ್ಯನ ಚಿತ್ರಗಳು ಬಿಳಿ-ಕಪ್ಪು ದ್ವಿವರ್ಣಗಳಲ್ಲಿ ಮತ್ತು ಅಚ್ಚಕಪ್ಪು ಬಣ್ಣಗಳಲ್ಲಿ ಇವೆ. ಈ ಚಿತ್ರಗಳ ವಸ್ತು ಮತ್ತು ಶೈಲಿಯ ಮೇಲೆ ಇದು ಯುಗದ ಅಂತ್ಯಭಾಗದ ಕಾಲದ್ದಿರಬಹುದೆಂದು ಊಹಿಸಲಾಗಿದೆ. ಬಾದಾಮಿಯಿಂದ ಸುಮಾರು 1ಕಿ.ಮೀ. ದೂರದಲ್ಲಿ ಬಾದಾಮಿ-ಬನಶಂಕರಿ ರಸ್ತೆಯ ಎಡ ಬದಿಯ ಬೆಟ್ಟದ ಒಂದು ಆಸರೆಯಲ್ಲಿ ಅತಿ ಅಪರೂಪದ ಬೇಟೆಗಾರರ, ಪ್ರಾಣಿಗಳ (ಕಾಡು ಹಂದಿ) ಕೆಮ್ಮಣ್ಣಿನ ಶಗಳಿವೆ. ಇವುಗಳ ಶೈಲಿ ಲಕ್ಷಣಗಳಿಂದ ಇವು ಅಂತ್ಯ ಹಳೆಶಿಲಾಯುಗವೆಂದು ಹೇಳಬಹುದು ಲಿಂದ ಸು.2ಮೀ ದೂರದಲ್ಲಿ ಉತ್ತರಕ್ಕೆ, ಬಾದಾಮಿ-ಮಹಾಕೂಟದ ಒಳ ರಸ್ತೆಯ ಬಲಬದಿಯ ಒಂದು ದೊಡ್ಡ ಗವಿಯಲ್ಲಿ ಕೆಮ್ಮಣ್ಣಿನಲ್ಲಿ ಎಳೆದ ಪ್ರಾಣಿಗಳ ಹಾಗೂ ಅಸ್ಪಷ್ಟವಾದ ಕುಬ್ಜಗಣಗಳು, ಬಾದಾಮಿ ರೇಖಾಚಿತ್ರಗಳು ಹಾಗೂ ಬಿಳಿಬಣ್ಣದಲ್ಲಿ ಬರೆದ 4-5ನೆಯ ಶತಮಾನದ ಒಂದು ಸಾಲಿನ ಎರಡು ಶಾಸನಗಳೂ ಇವೆ. ಆದಿ ಇತಿಹಾಸ ಕಾಲದ ಪ್ರಾಚ್ಯಾವಶೇಷಗಳೂ ಆದಿ ಹಳೆ ಶಿಲಾಯುಗ ಸಂಸ್ಕೃತಿಯ ಕಲ್ಲಿನ ಕೈಗೊಡಲಿ, ಬಾಚಿ ಮೊದಲಾದ ಉಪಕರಣಗಳೂ ಈ ಊರಿನ ಉತ್ತರ ಬದಿಯ ಕೊಳ್ಳದಲ್ಲಿ ದೊರೆತಿವೆ. ಈ ಗವಿಯಿಂದ ಮತ್ತೆ 3ಕಿಮೀ ದೂರದಲ್ಲಿ ಸ್ಥಳೀಕವಾಗಿ ಶಿಡ್ಲಫಡಿ ಎಂದು ಕರೆಯಲಾದ ಒಂದು ಗವಿಯಲ್ಲೂ ಆನೆ, ಪಕ್ಷಿ ಮುಂತಾದ ಚಿತ್ರಗಳಿವೆ ಮತ್ತು ಇಲ್ಲಿ ನವಶಿಲಾಯುಗ ಸಂಸ್ಕೃತಿಯ ಮಣಾತ್ರೆ ಮತ್ತು ಶಿಲಾಯುಧಗಳ ಅವಶೇಷಗಳನ್ನು, ಇದಕ್ಕೂ ಹಿಂದಿನ ಆದಿ ಹಳೆಯ ಶಿಲಾಯುಗದ ಕೆಲವು ಕಲ್ಲಿನ ಉಪಕರಣಗಳನ್ನು ಹಿಂದೆ ಶೋಧಿಸಲಾಗಿತ್ತು. ಬಾದಾಮಿಯ ನೈರುತ್ಯ ಮತ್ತು ಈಶಾನ್ಯ

ದಿಕ್ಕಿಗೆ ಅನುಕ್ರಮವಾಗಿ ಸು.8 ಮತ್ತು 18 ಕಿಮೀ ದೂರದಲ್ಲಿರುವ ಚೋಳಗುಡ್ಡ ಮತ್ತು ನಂದಿಕೇಶ್ವರದ ಬಳಿಯ ಮಲಪ್ರಭಾ ನದಿ ಪಾತ್ರದಲ್ಲಿ ಆದಿ ಹಳೆಶಿಲಾಯುಗದ ಆಯುಧಗಳು ದೊರೆತಿವೆ. ಹೀಗೆ ಬಾದಾಮಿ ಪ್ರದೇಶ ಆದಿ ಹಳೆಯ ಶಿಲಾಯುಗದಿಂದಲೂ ಮಾನವನ ನೆಲೆವೀಡಾಗಿದ್ದು, ಮುಂದೆ ಸುಸಂಸ್ಕೃತ ವಾಣಿಜ್ಯಕೇಂದ್ರವಾಗಿ ಬೆಳೆದು ಕೊನೆಯಲ್ಲಿ ಒಂದು ಮಹಾ ಸಾಮ್ರಾಜ್ಯದ ರಾಜಧಾನಿಯಾಗಿ ಕೀರ್ತಿಶಿಖರವನ್ನೇರಿತು ಎಂದು ಹೇಳಬಹುದು.

ಚಾಳುಕ್ಯರ ಕಾಲದ ಅನಂತರವೂ ಬಾದಾಮಿ ಆ ಪ್ರದೇಶದಲ್ಲಿ ತನ್ನ ಪ್ರಾಮುಖ್ಯ ಉಳಿಸಿಕೊಂಡಿದ್ದಂತೆ ತೋರುತ್ತದೆ. ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಳುಕ್ಯರ ಕಾಲದ ಅವಶೇಷಗಳು ಹೆಚ್ಚಾಗಿಲ್ಲ. ಆದರೆ 1339ರ ಒಂದು ಶಾಸನದಲ್ಲಿ ವಿಜಯನಗರದ ದೊರೆ ಮೊದಲನೆಯ ಹರಿಹರ 2,000 ಮಹಾಜನಗಳಿಗೆ ಬಾದಾಮಿಯನ್ನು ಕೊಟ್ಟು, ಉತ್ತರದ ಕಡೆಯ ಕೋಟೆಯನ್ನು ಕಟ್ಟಲು ಆಣತಿ ಮಾಡಿದಂತಿದೆ. ಕೃಷ್ಣದೇವರಾಯನ ಕಾಲದವರೆಗೂ ಬಾದಾಮಿ ವಿಜಯನಗರದ ಆಡಳಿತಕ್ಕೊಳಪಟ್ಟಿದ್ದು, ಅನಂತರ ಆದಿಲ್ ಶಾಹಿ ದೊರೆಗಳ ಕೈಸೇರಿತು. 1746ರಲ್ಲಿ ಸವಣೂರು ನವಾಬ ಮತ್ತು ಮೂರನೆಯ ಪೇಷೆಯ ನಡುವೆ ಸಂಧಾನವಾಗಿ ಬಾದಾಮಿಯನ್ನು ಪೇಶ್ವೆಗೆ ಕೊಡಲು ಒಪ್ಪಿಗೆಯಾದರೂ ಪೇಶ್ವೆ ಮತ್ತು ಹೈದರಾಬಾದಿನ ನಿಜಾಮ ಇಬ್ಬರೂ ಸೇರಿ ಸವಣೂರು ನವಾಬನ ಮೇಲೆ ದಂಡೆತ್ತಿ ಬಂದಾಗ 1756ರಲ್ಲಿ ಈ ಊರು ಪೇಶ್ವೆಗೆ ಸೇರಿತ್ತು. 1778ರಲ್ಲಿ ದಕ್ಷಿಣ ಬಿಜಾಪುರದ ಕೆಲವು ಪ್ರದೇಶಗಳೊಡನೆ ಬಾದಾಮಿಯನ್ನು ಹೈದರ್ ಪಡೆದುಕೊಂಡ. 1786ರಲ್ಲಿ ನಾನಾ ಫಡ್ನವೀಸನ ಕೈಕೆಳಗಿನ ಮರಾಠ ಸೈನ್ಯ ಮತ್ತು ನಿಜಾಮನ ಸೈನ್ಯ ಸೇರಿ ನಾಲ್ಕು ವಾರಗಳ ಕಾಲ ಮುತ್ತಿ ಬಾದಾಮಿಯನ್ನು ವಶಪಡಿಸಿಕೊಂಡವು. 1818ರ ಮರಾಠ ಯುದ್ಧದಲ್ಲಿ ಜನರಲ್ ಮನ್ರೋ ಬಾದಾಮಿಯನ್ನು ಮುತ್ತಿ ವಶಪಡಿಸಿಕೊಂಡ. 1840ರಲ್ಲಿ ನರಸಿಂಹ ದತ್ತಾತ್ರೇಯ (ನರಸಿಂಗರಾವ್) ಎಂಬ ಕುರುಡ ತನ್ನ 125 ಅರಬರ ದಂಡಿನೊಡನೆ ಬಂದು ಬಾದಾಮಿಯನ್ನು ಮುತ್ತಿ ಲೂಟಿ ಹೊಡೆದು ತಾನೇ ದೊರೆಯೆಂದು ಘೋಷಿಸಿ ಕೊಂಡ. ಒಂದು ವಾರದ ಒಳಗೆ ಒಂದು ಚಿಕ್ಕ ಬ್ರಿಟಿಷ್ ಸೈನ್ಯ ಬಾದಾಮಿಗೆ ಬಂದು ಇವರನ್ನೆಲ್ಲಾ ಸೆರೆಹಿಡಿಯಿತು. 1845ರಲ್ಲಿ ಇಲ್ಲಿಯ ಕೋಟೆಗಳು ಹಾಳುಬಿದ್ದವು. ಅನಂತರ ಈ ಊರು ಒಂದು ಸಾಮಾನ್ಯ ಸ್ಥಳವಾಯಿತು. ಇಂದು ಬಾದಾಮಿಯಲ್ಲಿ ಎರಡು ಹಾಳುಬಿದ್ದ ಕೋಟೆಗಳೂ ನಾಲ್ಕು ಗುಹಾಂತರ ದೇವಾಲಯಗಳೂ ಅನೇಕ ಭಗ್ನ ದೇವಾಲಯ ಗಳೂ ಕೆಲವು ಶಾಸನಗಳೂ ಉಳಿದು ಬಂದಿವೆ.

**ಕೋಟೆಗಳು:**

ಬಾದಾಮಿಯ ಉತ್ತರ ಮತ್ತು ದಕ್ಷಿಣದ ಬೆಟ್ಟಗಳ ಮೇಲೆ ಎರಡು ಬಲವಾದ ಕೋಟೆಗಳಿವೆ. ಉತ್ತರದ ಕಡೆಯ ಕೋಟೆಯನ್ನು ಬಾವನ್ ಬಂಡೆ ಕೋಟೆ ಯೆಂದೂ ದಕ್ಷಿಣ ಕಡೆಯ ಕೋಟೆಯನ್ನು

ರಣಮಂಡಲ ಕೋಟೆಯೆಂದೂ ಕರೆಯುತ್ತಾರೆ. ಎರಡೂ ಕೋಟೆಗಳ ಮಧ್ಯೆ 270ಮೀ ಅಂತರವಿದ್ದು ಎರಡೂ ನೆಲಮಟ್ಟದಿಂದ ಸು.72ಮೀ ಎತ್ತರದಲ್ಲಿವೆ. ಉತ್ತರದ ಕೋಟೆಗೆ ಹೋಗಲು ಊರಿನ ಒಳಗಿನಿಂದ ಮಾರ್ಗವಿದೆ. ಮೇಲೆ ಗುಡ್ಡದ ಅಂಚಿನುದ್ದಕ್ಕೂ ಅಲ್ಲಲ್ಲಿ ಹಾಳಾಗಿರುವ ಕೋಟೆಗೋಡೆ ಇದೆ. ಬಾದಾಮಿಯ ಅತ್ಯಂತ ಪ್ರಾಚೀನ ಶಾಸನ ಈ ಕೋಟೆಗೆ ಸಂಬಂಧಿಸಿದ್ದು. ಇದು ಗುಡ್ಡದಲ್ಲಿ ಒಂದು ಬಹು ಇಕ್ಕಟ್ಟಾದ ಕಣಿವೆಯಲ್ಲಿ ಎತ್ತರ ಹಾಗೂ ಕಡಿದಾದ ಬಂಡೆಯ ಮೇಲೆ ಇದೆ. ಶ್ರೌತ ವಿಧಿಗಳಗನುಸಾರವಾಗಿ ಅಶ್ವಮೇಧ ಮೊದಲಾದ ಯಜ್ಞಗಳನ್ನೂ ಹಿರಣ್ಯಗರ್ಭ ಮುಂತಾದ ಮಹಾ ದಾನಗಳನ್ನೂ ಮಾಡಿದ ಚಳುಕ್ಯ ವಲ್ಲಭೇಶ್ವರನು (ಒಂದನೆಯ ಪುಲಕೇಶಿ) ಅನುಕೂಲಕರವಾದ ಈ ಗುಡ್ಡದ ಮೇಲಿರುವ ವಾತಾಪಿ ಅಧಿಷ್ಠಾನದಲ್ಲಿ ಮೇಲಿಂದಾಗಲಿ ಕೆಳಗಿಂದಾಗಲಿ ಅಭೇದ್ಯವಾದ ಕೋಟೆಯನ್ನು ಶಕವರ್ಷ 465ರಲ್ಲಿ (543) ಕಟ್ಟಿಸಿದನೆಂದು ಈ ಶಾಸನ ತಿಳಿಸುತ್ತದೆ. ಆದರೆ ಚಳುಕ್ಯರ ಕಾಲದ್ದೆಂದು ಸ್ಪಷ್ಟವಾಗಿ ಗುರುತಿಸಬಹುದಾದ ಕೋಟೆಯ ಭಾಗಗಳು ಉಳಿದು ಬಂದಿಲ್ಲವೆಂದೇ ಹೇಳಬಹುದು. ಮುಂದೆ ರಾಷ್ಟ್ರಕೂಟರ ಕಾಲದಲ್ಲೂ ವಿಜಯನಗರ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲೂ ಇದನ್ನು ವಿಸ್ತರಿಸಲಾಗಿದೆ. ದಕ್ಷಿಣ ಗುಡ್ಡದ ಮೇಲಿನ ಕೋಟೆ 18ನೆಯ ಶತಮಾನದ್ದು, ಇದು ಫಿರಂಗಿ ಹಾರಿಸಲು ಅನುಕೂಲವಿರುವ ಮತ್ತು ಫಿರಂಗಿ ಹೊಡೆತವನ್ನು ತಡೆಯಬಲ್ಲ ಭದ್ರವಾದ ಕಟ್ಟಡ. ಎರಡೂ ಕೋಟೆಗಳಿಗೆ ಅನೇಕ ಕಲ್ಲುಮೆಟ್ಟಲುಗಳೂ ಕಿರಿದಾದ ಪ್ರವೇಶದ್ವಾರಗಳೂ ಇವೆ. ಕೋಟೆಗೋಡೆಗಳ ನಿರ್ಮಾಣದ ರೀತಿ ಅವುಗಳ ಹೊರಬದಿಯಲ್ಲಿ ಕೊತ್ತಳದ ಆಕಾರ, ಗೋಡೆಯ ಮೇಲೆ ಇರುವ ರಕ್ಷಣಾ ಕಟಾಂಜನದ ಸ್ವರೂಪದಿಂದ ಆಯಾಯ ಕಾಲದ ವಿವಿಧ ಭಾಗಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ ಗೋಡೆಗಳಲ್ಲಿ ಗಾರೆಯ ಉಪಯೋಗ ಮತ್ತು ಮೇಲಿನ ರಕ್ಷಣಾ ಕಟಾಂಜನ–ಇವು ಹೈದರ್, ಟಿಪ್ಪುಸುಲ್ತಾನರ ಕಾಲದಲ್ಲಿ ಕಟ್ಟಿಸಿದ ಭಾಗಗಳ ವೈಶಿಷ್ಟ್ಯ.

**ಪಟ್ಟದಕಲ್ಲು**

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನಲ್ಲಿ ಬಾದಾಮಿಯಿಂದ ಪೂರ್ವಕ್ಕೆ 22ಕಿಮೀ ದೂರದಲ್ಲಿ ಮಲಪ್ರಭಾ ನದಿಯ ಎಡದಂಡೆಯಲ್ಲಿರುವ ಗ್ರಾಮ. ಹಿಂದೆ ಕಿಸುವೊಳಲ್, ಪಟ್ಟದ ಕಿಸುವೊಳಲ್ ಎಂದು ಪ್ರಸಿದ್ಧವಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿರುವ ಬಾದಾಮಿಯ ಚಾಳುಕ್ಯರ ಕಾಲದ ದೇವಾಲಯಗಳಿಂದ ಪ್ರಾಮುಖ್ಯತೆ ಪಡೆದಿದ್ದು ಈಗ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. ಯುನೆಸ್ಕೋ ಸಂಸ್ಥೆ ಇದನ್ನು ವಿಶ್ವ ಪರಂಪರೆ ಸ್ಮಾರಕವೆಂದು ಘೋಷಿಸಿದೆ. ಇಲ್ಲಿಗೆ ಬಾದಾಮಿ ಮತ್ತು ಐಹೊಳೆಗಳಿಂದ ಉತ್ತಮ ಮಾರ್ಗ ಸಂಪರ್ಕವಿದೆ. ಪಟ್ಟದಕಲ್ಲಿನ ಪ್ರದೇಶ ಪ್ರಾಗಿತಿಹಾಸದ ಕಾಲದಿಂದಲೂ ಜನವಸತಿಯುಳ್ಳದ್ದಾಗಿತ್ತು. ಇಲ್ಲಿಯ ಮಲಪ್ರಭಾ ನದಿಯ ಪಾತ್ರದಲ್ಲಿ ಹಳೆಯ ಶಿಲಾಯುಗದ ಶಿಲೋಪಕರಣಗಳು ದೊರಕುವುದುಂಟು. ಈ ಗ್ರಾಮಕ್ಕೆ ಒಂದು ಕಿಮೀ ಪಶ್ಚಿಮದಲ್ಲಿ ಬಾಚನಗುಡ್ಡ

ಗ್ರಾಮದ ಬಳಿ ಬೃಹತ್ ಶಿಲಾ ಸಮಾಧಿಗಳೂ ಅಲ್ಲಿಂದ ಸ್ವಲ್ಪ ದೂರದಲ್ಲಿ ಆದಿಚಾರಿತ್ರಿಕ ಕಾಲದ ಒಂದು ನೆಲೆಯೂ ಇವೆ. ಚಾಳುಕ್ಯ ಪೂರ್ವ (ಬಹುಶಃ ಕದಂಬ) ಕಾಲಕ್ಕೆ ಸಂಬಂಧಿಸಿದ ಕೆಲವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳೂ ಪಟ್ಟದಕಲ್ಲಿನಲ್ಲಿ ದೊರಕಿವೆ. ಸಂಗಮೇಶ್ವರ ದೇವಾಲಯ ಮತ್ತು ಜೈನದೇವಾಲಯದ ಬಳಿಯಲ್ಲಿ ನಡೆಸಿದ ಉತ್ಖನನಗಳಿಂದ ಈ ಕಟಡಗಳು ಬೆಳಕಿಗೆ ಬಂದುವು. ಪ್ರಶ.2ನೆಯ ಶತಮಾನದಲ್ಲಿದ್ದ ಗ್ರೀಕ್ ಭೂಗೋಳಕಾರ ಟಾಲಮಿ ವ್ಯಾಪಾರ ಸ್ಥಳಗಳಲ್ಲಿ ಒಂದೆಂದು ಹೆಸರಿಸಿರುವ ಪೆತರ್ಗಲ್ ಈ ಪಟ್ಟದಕಲ್ಲು ಎಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಪಟ್ಟದಕಲ್ಲು ವಿಶೇಷ ಪ್ರಾಮುಖ್ಯತೆಯನ್ನು ಪಡೆದದ್ದು ಬಾದಾಮಿಯ ಚಾಳುಕ್ಯರ ಕಾಲದಲ್ಲಿ; ಅದರಲ್ಲೂ 7-8ನೆಯ ಶತಮಾನಗಳಲ್ಲಿ. ಚಳುಕ್ಯ ವಿನಯಾದಿತ್ಯನ ಒಂದು ಶಾಸನ ಇದನ್ನು ಕಿಸುವೊಳಲೆ, ಪಟ್ಟದ ಕಿಸುವೊಳಲೆ ಎಂದು ಕರೆದಿದೆ. ಈ ಪ್ರದೇಶದ ಸುತ್ತ ನಸುಗೆಂಪು ಬಣ್ಣದ ಕಲ್ಲುಗುಡ್ಡಗಳು ಇರುವುದರಿಂದ ಕಿಸುವೊಳಲ್ ಎಂದೂ ಚಾಳುಕ್ಯ ಸಾಮ್ರಾಟರು ಇಲ್ಲಿ ತಮ್ಮ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿಕೊಳ್ಳುತ್ತಿದ್ದರಿಂದ ಪಟ್ಟದ ಕಿಸುವೊಳಲ್ ಎಂದೂ ಹೆಸರಾಗಿದ್ದಂತೆ ತೋರುತ್ತದೆ. ಇಲ್ಲಿ ರಾಜರು ಪಟ್ಟಾಭಿಷಿಕ್ತರಾಗುತ್ತಿದ್ದ ವಿಷಯ 11-12ನೆಯ ಶತಮಾನದ ಶಾಸನಗಳಲ್ಲಿ, ಸಿಂಗರಾಜಪುರಾಣ (ಸು.1500) ಮತ್ತು ಹಮೀರ ಕಾವ್ಯ (ಸು.1540) ಈ ಗ್ರಂಥಗಳಲ್ಲಿ ವರ್ಣಿತವಾಗಿದೆ. ಇಲ್ಲಿ ಮಲಪ್ರಭಾನದಿ ಉತ್ತರಗಾಮಿಯಾಗಿರುವುದರಿಂದ ಈ ಸ್ಥಳ ತೀರ್ಥಕ್ಷೇತ್ರವೆಂದು ಪರಿಗಣಿತವಾಗಿದ್ದು. ಸಮೀಪದ ರಾಜಧಾನಿ ಬಾದಾಮಿಯಲ್ಲಿದ್ದ ಅರಸರು ಇಲ್ಲಿ ಪಟ್ಟಬಂಧೋತ್ಸವವನ್ನು ಮಾಡಿಕೊಳ್ಳುತ್ತಿದ್ದರೆ ಆಶ್ಚರ್ಯವಿಲ್ಲ. 1162ರ ಶಾಸನವೊಂದು ಕಿಸುವೊಳಲನ್ನು ದಕ್ಷಿಣದ ಕಾಶಿ ಯೆಂದು ಹೇಳಿದೆ. ಈ ಊರು ಕೆಲವು ಚಳುಕ್ಯ ಅರಸರ ಕಾಲದಲ್ಲಿ ರಕ್ತಪುರ (ಕಿಸುವೊಳಲ್ನ ಸಂಸ್ಕೃತ ರೂಪ) ಎಂಬ ಅಭಿಧಾನದಿಂದ ಒಂದು ರಾಜಧಾನಿಯಾಗಿತ್ತೆಂದೂ ಕೆಲವು ಕಾಲ ನೆಲೆವೀಡಾಗಿತ್ತೆಂದೂ ಕೆಲವು ಚಳುಕ್ಯ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಕಾರಣದಿಂ ದಾಗಿ ಈ ಊರಿನಲ್ಲಿ ತತ್ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿತವಾದುವು.

ಅನಂತರ ರಾಷ್ಟ್ರಕೂಟರ ಕಾಲದಲ್ಲೂ ಈ ಊರು ಪ್ರಸಿದ್ಧ ಸ್ಥಳವಾಗಿರಬೇಕೆಂಬುದು ಕವಿರಾಜಮಾರ್ಗದಲ್ಲಿ ತಿರುಳಗನ್ನಡ ಸೀಮೆಯನ್ನು ವರ್ಣಿಸುವ ಪಟ್ಟಿಯಲ್ಲಿ ಬರುವ ಕಿಸುವೊಳಲ ಹೆಸರಿನಿಂದ ಊಹಿಸಬಹುದಾಗಿದೆ. ರಾಷ್ಟ್ರಕೂಟ ಕಲಿವಲ್ಲಭನ ಕಾಲದ ಶಾಸನವೊಂದು ವಿರೂಪಾಕ್ಷ ದೇವಾಲಯ ಉತ್ತರ ದಿಶೆಯ ಮುಖ ಮಂಟಪದಲ್ಲಿದೆ. ಮುಂದೆ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಊರು ಕಿಸುಕಾಡು-70 ಎಂಬ ಚಿಕ್ಕ ಪ್ರಾಂತದ ಮುಖ್ಯಸ್ಥಳವಾಗಿತ್ತು. ಆ ಕಾಲದ ಕೆಲವು ಶಾಸನಗಳಲ್ಲಿ ಅಂದಿನ ರಾಜ ಮಾಂಡಳಿಕರು ಇಲ್ಲಿನ ದೇವಾಲಯಗಳಿಗೆ ದತ್ತಿಕೊಟ್ಟ ವಿವರಗಳು ದೊರಕುತ್ತವೆ. 2ನೆಯ ಸೋಮೇಶ್ವರನ (ಭುವನೈಕಮಲ್ಲ) 1070ರ ಶಾಸನವೊಂದರಲ್ಲಿ ಆತ ಕಿಸುವೊಳಲಿನ ಮೂಲಸ್ಥಾನ ದೇವರಿಗೆ 12 ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿಷಯ ಬರೆದಿದೆ. ಪಟ್ಟದಕಲ್ಲಿನಲ್ಲಿ

ಪಟ್ಟಾಭಿಷೇಕೋತ್ಸವ ನಡೆಯುತ್ತಿದ್ದುದನ್ನು ತಿಳಿಸಿದೆ. 1162ರ ಶಾಸನವೊಂದರಿಂದ ಈ ಭೂಭಾಗ ಎರಂಬರಗೆಯ ಸಿಂದರ ಆಡಳಿತಕ್ಕೊಳಪಟ್ಟಿತ್ತು. ಆ ಮನೆತನದ ಮಹಾಮಂಡಲೇಶ್ವರ 2ನೆಯ ಚಾವುಂಡರ ಪತ್ನಿ ದೇಮಲದೇವಿಯ ಪುತ್ರ ಆಚುಗಿ ಪಟ್ಟಣದ ಕಿಸುವೊಳಲನ್ನು ಕುಮಾರ ವೃತ್ತಿಯಿಂದ ವಿಶ್ವೇಶ್ವರನಿಗೆ ಸಮನೆನಿಸಿದ ವಿಜಯೇಶ್ವರ ದೇವರಿಗೆ 300 ಮತ್ತರ ಭೂಮಿಯನ್ನು ದತ್ತಿ ಬಿಟ್ಟಳು. ಕಲ್ಯಾಣದ ಚಾಳುಕ್ಯರ ಕಾಲದ ಅನಂತರ ಪಟ್ಟದಕಲ್ಲು ತನ್ನ ಉತ್ತಮ ಸ್ಥಿತಿಯನ್ನು ಕಳೆದುಕೊಳ್ಳಲಾರಂಭಿಸಿ ಕ್ರಮೇಣ ಈಗಿನ ಚಿಕ್ಕ ಗ್ರಾಮವಾಗಿ ಪರಿಣಮಿಸಿತು.

ಪಟ್ಟದಕಲ್ಲಿನ ಹಿರಿಮೆ – ಗರಿಮೆಗಳಿಗೆ ಕಾರಣ ಇಲ್ಲಿಯ ದೇವಾಲಯಗಳು. ಈ ದೇವಾಲಯ ಗಳು ಕರ್ನಾಟಕದ ವಾಸ್ತುಶಿಲ್ಪ ಬೆಳೆವಣಿಗೆಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಭಾರತದಲ್ಲಿ ಕಂಡು ಬರುವ ಎರಡು ಪ್ರಮುಖ ವಾಸ್ತು ಪ್ರಕಾರಗಳಾದ ದ್ರಾವಿಡ ಮತ್ತು ನಾಗರ ರೀತಿಯ ದೇವಾಲಯಗಳು ಒಟ್ಟಿಗೆ ಈ ಸ್ಥಳದಲ್ಲಿ ಕಂಡುಬರುವುದು ಇಲ್ಲಿಯ ವಿಶೇಷ ಸೌಂದರ್ಯ ದೃಷ್ಟಿಯಿಂದಲೂ ಈ ದೇವಾಲಯಗಳು ಉನ್ನತಮಟ್ಟದವು. ಹಿಂದೆ ಪಟ್ಟದಕಲ್ಲು ತೀರ್ಥಕ್ಷೇತ್ರವೆಂದೂ ಹೆಸರುಗಳಿಸಿತ್ತಾಗಿ ಈ ದೇವಾಲಯಗಳು ಬಹುಜನರನ್ನು ಆಕರ್ಷಿಸುತ್ತಿದ್ದಿರಬೇಕು. ಇಲ್ಲಿ ಈಗ ಸುಮಾರು ಹತ್ತು ದೇವಾಲಯಗಳು ಬಹುಪಸಿದ್ದ, ಅವುಗಳಲ್ಲಿ ಒಂಬತ್ತು ಶೈವ, ಒಂದು ಜೈನ, ಜಿನಾಲಯ ಊರ ಹೊರಗೆ ಬಾದಾಮಿಯ ದಾರಿಯಲ್ಲಿದೆ. ಉಳಿದ ಒಂಬತ್ತು ದೇವಾಲಯಗಳೂ ನದಿಯ ದಂಡೆಗುಂಟ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿಕೊಂಡಿವೆ.

ಪಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯದ ಬಹು ಸುಂದರವೂ ನೋಡದೂ ಆದ ಕೃತಿ: ಚಳುಕ್ಯ ಇಮ್ಮಡಿ ವಿಕ್ರಮಾದಿತ್ಯ (733– 45) ಮೂರು ಸಲ ಪಲ್ಲವರನ್ನು ಸೋಲಿಸಿ ಕಂಚಿಯನ್ನು ಆಕ್ರಮಿಸಿಕೊಂಡಿದ್ದರ ಜ್ಞಾಪಕಾರ್ಥವಾಗಿ ಅವನ ಒಬ್ಬ ರಾಣಿ ಲೋಕಮಹಾದೇವಿ ಈ ದೇವಾಲಯವನ್ನೂ ಇನ್ನೊಬ್ಬ ರಾಣಿ ಈ ದೇ. ಪಕ್ಕದಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನೂ ಕಟ್ಟಿಸಿದರೆಂದು ಇಲ್ಲಿಯ ಶಾಸನವೊಂದರಲ್ಲಿ ತಿಳಿದುಬರುತ್ತದೆ.

ಪಟ್ಟದಕಲ್ಲಿನಲ್ಲಿ ಸು.30 ಶಾಸನಗಳು ಇದುವರೆಗೆ ದೊರೆತಿವೆ. ಇವುಗಳಲ್ಲಿ ಕೆಲ ಕಂಬಗಳಲ್ಲಿ, ಗೋಡೆಗಳಲ್ಲಿ, ತೋಲೆಗಳಲ್ಲಿ ಮತ್ತು ಶಿಲ್ಪಗಳ ಪಾದಪೀಠದಲಿ ಅವು ಪಟ್ಟದಕಲ್ಲಿನ ದೇವಾಲಯಗಳ ರೂವಾರಿಗಳನ್ನು ಹೆಸರಿಸುತ್ತವಲ್ಲದೆ, ಆ ದೇವಾ ನಿರ್ಮಾಣಕ್ಕೆ ಕಾರಣ, ದಾನದತ್ತಿಗಳು ಇತ್ಯಾದಿಗಳನ್ನೂ ಜೊತೆಗೆ ವಿವರಿಸುತ್ತವೆ ಗಂಗಾತ ಮೃಗಥಣಿಕಾದಿಂದ ಬಂದ ಜ್ಞಾನಶಿವಾಚಾರ್ಯನ ವಿಷಯವನ್ನು ತಿಳಿಸುವ ಪ್ರಸಿದ್ಧವಾದ ಪಟ್ಟದಕಲ್ಲು ಸ್ತಂಭಶಾಸನ ಮಲ್ಲಿಕಾರ್ಜುನ ದೇವಾಲಯದ ಸ್ವಲ್ಪ ಮುಂದೆ ಇದೆ.

ಒಂದು ಕಾಲದಲ್ಲಿ ಪವಿತ್ರ ಸ್ಥಳವೆಂದು ಪರಿಗಣಿತವಾಗಿದ್ದು, ಪಟ್ಟದ ಸ್ಥಾನವಾಗಿದ ಪಟ್ಟದಕಲ್ಲು ಕಲಾರಸಿಕರಿಗೆ ಹಾಗೂ ವಾಸ್ತುಶಿಲ್ಪ ವಿದ್ಯಾರ್ಥಿಗಳಿಗೆ ಇಂದಿಗೂ ಆಕರ್ಷಣೀಯ ಸ್ಥಾನವಾಗಿದೆ. ಒಂದೇ ಕಡೆ ನಾಗರ ಮತ್ತು ದ್ರಾವಿಡ ಮಾದರಿಗಳ ಉತ್ತಮ ದೇವಾಲಯಗಳನ್ನು ಕಟ್ಟಿರುವ ಏಕೈಕ ಸ್ಥಳ ಪಟ್ಟದಕಲ್ಲು. ಅಲ್ಲದೆ ಇದು ಚಳುಕ್ಯ ಶೈಲಿಯ ಕೊನೆಯ ಘಟ್ಟದ ಮಹೋನ್ನತ ಕೃತಿಗಳನ್ನೂ ಹೊಂದಿರುವ ಸ್ಥಳ. ಒಬ್ಬ ವಿದ್ವಾಂಸರ ಪ್ರಕಾರ ಇಲ್ಲಿನ ಶಿಲ್ಪಗಳು ಇಡೀ ಪಶ್ಚಿಮ ಭಾರತದಲ್ಲೇ ಅನುಪಮವಾದ ಸೌಂದರ್ಯವುಳ್ಳವು.

**ಹಂಪಿ**

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಐತಿಹಾಸಿಕ ಕೇಂದ್ರ. ಬೆಂಗಳೂರಿಗೆ 360 ಕಿ.ಮೀ, ಬಳ್ಳಾರಿ 77 ಕಿ.ಮೀ ಹಾಗೂ ಹೊಸಪೇಟೆಗೆ 13 ಕಿ.ಮೀ ದೂರದಲ್ಲಿ ತುಂಗಾಭದ್ರಾ ದಂಡೆಯ ಮೇಲಿದೆ. ವಿಜಯನಗರದ ಸ್ಥಾಪನೆಯ ಮುಂಚಿನಿಂದಲೂ ಪಂಪಾಕ್ಷೇತ್ರ, ಪಂಪಾತೀರ್ಥ, ಭಾಸ್ಕರಕೇತ್ರ, ವಿರೂಪಾಕ್ಷ ಮಹಾಕ್ಷೇತ್ರ ಮತ್ತು ಕಿಷ್ಕಿಂದೆ ಮೊದಲಾದ ನಾಮಗಳಿಂದ ಪ್ರಸಿದ್ಧ ಹೊಂದಿ ಜನಮನದಲ್ಲಿ ಆಳವಾಗಿ ಬೇರೂರಿದೆ. ವಿಜಯನಗರ ಸ್ಥಾಪನೆಯಿಂದ ದಖ್ಖನ್ ಭಾಗದ ಹಿಂದು ಮಹಾನಗರಗಳಲ್ಲಿ ಒಂದೆನಿಸಿತು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ, ಸಂಗಮ, ಸಾಳುವ, ತುಳುವ, ಅರವೀಡು ರಾಜವಂಶಸ್ಥರ ಆಳಲ್ವಿಕೆಯ ಅವಧಿಯಲ್ಲಿ ದೇಶ-ವಿದೇಶಗಳಲ್ಲಿ ಕೀರ್ತಿಗಳಿಸಿತು. ಇದರ ಉಚ್ಛ್ರಾಯದ ವೈಭವವನ್ನು ಅನೇಕ ವಿದೇಸಿ ಪ್ರವಾಸಿಗರು, ರಾಯಾಭಾರಿಗಳು ಹಾಗೂ ಚರಿತ್ರೆಕಾರರು ಮಿಕ್ತಮನಸ್ಸಿನಿಂದ ವರ್ಣಿಸಿದ್ದಾರೆ. ಇಂಥ ದೊಡ್ಡ ಸಾಮ್ರಾಜ್ಯಕ್ಕೆ ವಿದೇಶಗಳಿಂದ ಬಂದು ಹೋದವರ ಸಂಖ್ಯೆ ಅಪರಿಮಿತ. 15ನೆಯ ಶತಮಾನದ ಪೂರ್ವಾರ್ಧದಿಂದ ಈ ಯಾತ್ರ ಆರಂಭವಾಗಿ, ಸಾಮ್ರಾಜ್ಯದ ಅವನತಿಯ ಅನಂತರವೂ ಕಳೆದ ಶತಮಾನದವರೆಗೂ ಭೇಟಿ ನೀಡಿದವರ ಸಂಖ್ಯೆ ಕಡಿಮೆಯೇನಿಲ್ಲ. ಅವರಲ್ಲಿ ನಿಕೊಲೊ-ಡಿ-ಕೊಂಟಿ, ಅಬ್ದುಲ ರಜಾಕ್, ದುಆರ್ತೆ, ಬಾರ್ಬೋಸ, ಡೊಮಿಂಗೊ ಪೆಯಿಸ್, ನ್ಯನಿಜ್ ಅವರು ತಾವು ಕಂಡು ಕೇಳದ ಸಂಗತಿಗಳನ್ನು ದಾಖಲಿಸಿದ್ದಾರೆ.

ಹಂಪಿ ಪರಿಸರದಲ್ಲಿ ನಿಸರ್ಗ ನಿರ್ಮಿತವಾದಂತಹ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಹೊತ್ತ ಬೆಟ್ಟಗಳು, ನೀರಿನ ಸರಬರಾಜು, ಮಾನವನ ವಾಸಸ್ಥಾನಕ್ಕೆ ಯೋಗ್ಯವಾಗಿದ್ದರಿಂದ, ಇಲ್ಲಿ ಪ್ರಾಗಿತಿಹಾಸ ಕಾಲದ ಸಂಸ್ಕೃತಿ ಬೆಳೆದು ಬರಲು ಕಾರಣವಾಯಿತು. ಸ್ಥಳೀಯವಾಗಿ ಕರೆಯುತ್ತಿರುವ ಮುಸಳಯ್ಯನ ಗುಡ್ಡ, ಕಮಲಾಪುರ ಹತ್ತಿರದ ಹಳ್ಳದಲ್ಲಿ ಆದಿಶಿಲಾಯುಗದ ಅವಶೇಷಗಳು ಹಾಗೂ ಹಂಪಿಯ ಸುತ್ತಮುತ್ತಲಿನ 14 ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಕುರುಹುಗಳಿವೆ. ಆದಿ ಮಾನವ ನಿರ್ಮಿಸಿದ ಗವಿವರ್ಣ ಚಿತ್ರಗಳು ಬೆಟ್ಟಸಾಲುಗಳಲ್ಲಿವೆ. ಇಲ್ಲಿಯ ಉತ್ಖನನದಲ್ಲಿ ದೊರೆತ 1-2ನೆಯ ಶತಮಾನಕ್ಕೆ ಸೇರಿದ ಬ್ರ್ಯಾಹ್ಮಿಲಿಪಿಯ ಶಾಸನದಲ್ಲಿ ತಾರಸ ಪುತಸ ದಾನಮ್ ಎಂದು ಬರೆಯಲಾಗಿದೆ.

ಅಲ್ಲದೆ ಬುದ್ಧನ ಜಾತಕ ಕಥೆಗಳನ್ನೊಳಗೊಂಡ ಐದು ಫಲಕಗಳು ಸನ್ನತಿ, ಲಿಂಗಸುಗೂರು ಬೌದ್ಧವಶೇಷಗಳ ಮಾದರಿಯನ್ನು ಹೋಲುತ್ತವೆ. ಹಂಪಿ ನಗರಕ್ಕೆ ಸೇರಿದ ಕಮಲಾಪುರದಲ್ಲಿ ದೊರೆತ ಎರಡು ಗಚ್ಚು ಶಿಲ್ಪಗಳಲ್ಲಿ, ಒಂದು ತೆಳುವಾದ ಉಡುಗೆಯನ್ನು ಹೊಂದಿ ಗಾಂಧಾರ ಶಿಲ್ಪ ಮಾದರಿಯಲ್ಲಿದೆ. ಹಂಪಿಯ ಸುತ್ತಮುತ್ತಲಿನ ಪರಿಸರದಲ್ಲಿರುವ ಅಶೋಕನ ಶಾಸನಗಳು ಮತ್ತು ಇಲ್ಲಿಯ ಅವಶೇಷಗಳನ್ನು ಗಮನಿಸಿದರೆ; ಪ್ರಸ್ತುತ ಅವಧಿಯಲ್ಲಿ ಹಂಪಿ, ಉತ್ತರದ ಸನ್ನತಿ, ದಕ್ಷಿಣದ ಚಂದ್ರವಳ್ಳಿ, ವಾಯುವ್ಯದ ವಡಗಾಂವ್-ಮಾಧವಪುರ, ಕೊಲ್ಲಪುರಗಳಲ್ಲದೆ ಬಹುದೂರದ ಗಾಂಧಾರ ಪ್ರದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಪಡೆದಿದ್ದಂತೆ ಕಾಣುತ್ತದೆ. ಹಂಪಿಯಲ್ಲಿ ದೊರೆತ ಐದು ಫಲಕಗಳಲ್ಲಿ ಎರಡರಲ್ಲಿ ಶಾಸನಗಳಿವೆ. ಒಂದರಲ್ಲಿ ಧಾನ್ಯಕಟಕವೆಂಬ ಸ್ಥಳದ ಒಬ್ಬ ವರ್ತಕನ ಮಗ ಧಮ್ಮನೆಂಬುವವನು ತನ್ನ ತಂದೆ, ತಾಯಿ, ಹೆಂಡತಿ, ಮಗ, ಮೊಮ್ಮಗ, ಸ್ನೇಹಿತರು, ಸಂಬಂಧಿಕರು ಮತ್ತು ವರ್ತಕ ಸಮುದಾಯದವರು ಇಲ್ಲಿಯ ಚೈತ್ಯಕ್ಕೆ ದಾನಕೊಟ್ಟ ವಿಷಯವಿದೆ. ಬುದ್ಧನ ಚಿತ್ರವುಳ್ಳ ಇನ್ನೊಂದು ಫಲಕದಲ್ಲಿ ಶಾಸನ ತೀರ ಹಾಳಾಗಿದೆ. ವನಿಯ, ಅತೆ ವಾಸನಿಯ, ಪವಚಿತಯ, ಬಿಕುಣಿ, ದಮ್ಮ ಮೊದಲಾದ ಪದಗಳನ್ನು ಮಾತ್ರ ಗುರುತಿಸಲಾಗಿದೆ.

**ಉತ್ಖನನ;** ಹಂಪಿಯಲ್ಲಿಯ ವಿಜಯವಿಠ್ಠಲ ದೇವಾಲಯದ ಆಗ್ನೇಯ ದಿಕ್ಕಿನ ಬೆಟ್ಟದ ಸಾಲಿನಲ್ಲಿ ಮಸಳಯ್ಯನಗಡ್ಡದ ಒಂದು ಭಾಗದ ಸಮತಟ್ಟಿನಲ್ಲಿ ನವಶಿಲಾಯುಗ ಮತ್ತು ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಗಳ ಒಂದು ನೆಲೆಯನ್ನು ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಗುರುತಿಸಿತು. ಈ ಇಲಾಖೆ 2003ರಲ್ಲಿ ಈ ನೆಲೆಯಲ್ಲಿಯ ಸಂಸ್ಕೃತಿಗಳ ಅನುಕ್ರಮ ಹಂತಗಳು ಮತ್ತು ಸ್ಥೂಲವಾದ ಲಕ್ಷಣಗಳನ್ನು ತಿಳಿಯಲು ಸಣ್ಣ ಪ್ರಮಾಣದಲ್ಲಿ ಉತ್ಖನನ ನಡೆಸಿತು. ಇದರಲ್ಲಿ 1.ಮೀ.ಮಂದದ ಪದರದಲ್ಲಿ ಐದು ಸ್ತರಗಳನ್ನು ಗುರುತಿಸಲಾಯಿತು. ಮೊದಲ ಮೂರು ಸ್ತರಗಳಲ್ಲಿ 2 ಸಂಸ್ಕೃತಿಗಳ ಅವಶೇಷಗಳು ಒಟ್ಟೊಟ್ಟಿಗೆ ಇರುವುದು ಕಂಡುಬಂದಿತು. 4ನೆಯ ಸ್ತರದಲ್ಲಿ ಈ ಸಂಸ್ಕೃತಿಗಳ ಆರಂಭವು ಕಂಡು ಬಂದಿತು. ಕನ್ನೆ ನೆಲದ ಮೇಲಿದ್ದ 5ನೆಯ ಸ್ತರದಲ್ಲಿ ತಾಮ್ರ-ಶಿಲಾಯುಗ ಹಂತದಲ್ಲಿದ್ದ ನವಶಿಲಾ ಸಂಸ್ಕೃತ ಅವಶೇಷಗಳು ಮಾತ್ರ ಇದ್ದವು. ಮೊದಲ ಎರಡು ಸ್ತರಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಜನರ ಮಕ್ಕಳ ಎರಡು ಶವಕುಣಿಗಳು ಒಂದೊಂದರಂತೆ ಇದ್ದವು. 2ನೆಯ ಸ್ತರದ ಶವಕುಣಿಯಲ್ಲಿದ್ದ ಒಂದು ಬಟ್ಟಲಿನಲ್ಲಿ ಒಳಗೆ ಮತ್ತು ಹೊರಗೆ ಅಸ್ತಿ ಅವಶೇಷಗಳಿದ್ದವು ಮತ್ತು ಒಂದು ಸಣ್ಣ ಮಡಕೆಯ ಕಂಠ ಭಾಗದ ಹೊರಬದಿಯಲ್ಲಿ 2 ಸಣ್ಣ ಗುಮ್ಮಟಗಳನ್ನು ಅಂಟಿಸಲಾಗಿತ್ತು. ಇವು ಪ್ರಾಯಶಃ ಮಾತೃತ್ವದ ಸಂಕೇತವಾಗಿರಬಹುದು. ಒಟ್ಟಿನಲ್ಲಿ ಇದೊಂದು ಅಪರೂಪ ಮಾದರಿಯ ಪಾತ್ರ.ಇದರ ಜೊತೆಯಲ್ಲಿ ಕೆಂಪು ಬಣ್ಣದ ದೊಡ್ಡ ಗಡಿಗೆಯಲ್ಲಿ ಕಪ್ಪು-ಕೆಂಪು ದ್ವಿವರ್ಣದ ಬಟ್ಟಲಿದ್ದಿತು. ಪಾತ್ರೆಗಳ ಸುತ್ತಲೂ ಕಲ್ಲು ಚಕ್ಕೆಗಳನ್ನು ಇಡಲಾಗಿತ್ತು. ಮೂರನೆಯ ಸ್ತರದ ತಳಭಾಗದಲ್ಲಿ ದಮ್ಮಸು ಮಾಡಿದ ನೆಲದ ತುಣುಕುಗಳು ಕಂಡುಬಂದವು. ಬಹುಶಃ ಇವು ವಾಸದ ಮನೆಯ ಅವಶೇಷಗಳಾಗಿರಬೇಕು. ಮೊದಲು 2 ಸ್ತರದಲ್ಲಿ

ಬೃಹತ್ ಶಿಲಾ ಸಂಸ್ಕೃತಿಯ ಪಾತ್ರೆಗಳು ಹೆಚ್ಚಾಗಿದ್ದವು. ನವಶಿಲಾ ಸಂಸ್ಕೃತಿಯ ಪಾತ್ರೆಗಳು ಹೆಚ್ಚು ಕಡಿಮೆ ಸಮಾನ ಪ್ರಮಾಣದಲ್ಲಿದ್ದವು. ನಾಲ್ಕನೆಯ ಸ್ತರದಲ್ಲಿ ನವ ಶಿಲಾ ಸಂಸ್ಕೃತಿಯ ಮಣ್ಪಾತ್ರೆಗಳು ಹೆಚ್ಚಿನ ಪ್ರಮಾಣದಲ್ಲಿದ್ದವು. ಐದನೆಯ ಸ್ತರದಲ್ಲಿ ಅಭ್ರಕ ಮಿಶ್ರಿತ ಹೊಳಪಿನ ಬೂದು ಬಣ್ಣದ ಪಾತ್ರಗಳು ವಿಶೇಷವಾಗಿದೆ. ನವ ಶಿಲಾ ಸಂಸ್ಕೃತಿಯ ಪಾತ್ರೆಗಳಲ್ಲಿ ಬೂದು ಬಣ್ಣದ ಪಾತ್ರೆಗಳು ಹೆಚ್ಚು, ಕೆಂಪುವರ್ಣದ ಪಾತ್ರೆಗಳು ಕಡಿಮೆ, ಚುಳ್ಳಿಯ ಬಟ್ಟಲು, ತಟ್ಟೆಗಳು, ನಳಿಕೆಯುಳ್ಳ ಉಬ್ಬುಹೊಟ್ಟೆ ಪಾತ್ರೆಗಳು, ಬಹುರಂಧ್ರಗಳುಳ್ಳ ಪಾತ್ರಗಳು ಸಾಮಾನ್ಯ. ಇವು ಹೆಚ್ಚಾಗಿ ತಿರುಗುವ ಹಲಗೆಯ ಮೇಲೆ ಮಾಡಿದ ಪಾತ್ರೆಗಳು. ಕೈಯಿಂದ ಮಾಡಿದ ಪಾತ್ರೆಗಳೂ ಹೆಚ್ಚಾಗಿವೆ. ಮೂರನೆಯ ಸ್ತರದಲ್ಲಿ ಪಾತ್ರೆಗಳ ಜೊತೆಗೆ ತಗ್ಗು ನೀಳ ಪಟ್ಟಿಗಳುಳ್ಳ ಮತ್ತು ಒಂದು ತುದಿಯಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ ಸಮತಲವುಳ್ಳ ತಿರುಳುಗಲ್ಲು ಸಿಕ್ಕಿವೆ. ನಾಲ್ಕನೆಯ ಪದರಿನಲ್ಲಿಯೇ ಇಂತಹ ತಿರುಳುಗಲ್ಲು ಸಮಾನಾಂತರವುಳ್ಳ ಚರ್ಟ್ ಕಲ್ಲಿನ ತೆಳ್ಳನೆಯ ಅಲಗುಗಳು ಹೆಚ್ಚಾಗಿದ್ದವು. ಎರಡು ಮತ್ತು ಮೂರನೆಯ ಪದರಿನಲ್ಲಿ ಯಾವುದೇ ನಿರ್ದಿಷ್ಟ ಆಕಾರವನ್ನು ಗುರುತಿಸಲಾರದ ಕಬ್ಬಿಣದ ವಸ್ತುಗಳು ಇದ್ದವು. ವಿಶೇಷವೆಂದರೆ ಕಬ್ಬಿಣದ ಕಿಟ್ಟವು ದೊರಕಿರುವುದು. ಇವೆಲ್ಲವೂ ಸ್ಥಳೀಯವಾಗಿ ಗಣಿಗಾರಿಕೆ, ಲೋಹ ಮತ್ತು ವಿವಿಧ ಸ್ಥಳದಲ್ಲಿಯೇ ಮಾಡಲಾಗುತ್ತಿದ್ದುದನ್ನು ಸೂಚಿಸುತ್ತವೆ. ಈ ಪ್ರದೇಶದ ಇತರ ಸಮಕಾಲೀನ ನೆಲೆಗಳ ಆರಂಭದ ಕಾಲಮಾನವನ್ನು ಇಂಗಾಲ-14ರ ತಂತ್ರದಿಂದ ಪ್ರ.ಶ.ಪೂ.1800 ಎಂದು ನಿಗದಿಪಡಿಸಲಾಗಿದೆ. ಆದ್ದರಿಂದ ಈ ನೆಲೆ ಕೂಡ ಇದೇ ಕಾಲದ್ದಾಗಿರಬಹುದು. ಇದಕ್ಕೂ ಪೂರ್ವದಿಂದಲೇ ಇಲ್ಲಿ ಜನವಸತಿ ಆರಂಭವಾಗಿರುವ ಸೂಚನೆಗಳೂ ಇವೆ. ಸಾತವಾಹನರ ಕಾಲಕ್ಕಿಂತಲೂ ಸು.2000 ವರ್ಷಕ್ಕೂ ಹಿಂದಿನಿಂದ ಈ ಉತ್ಖನನ ಹಂಪಿಯಲ್ಲಿ ಕೆಲವು ನಿರ್ದಿಷ್ಟ ಸಂಸ್ಕೃತಿಗಳ ಜನಸಮುದಾಯಗಳು ನೆಲೆಸಿದ್ದವೆಂದು ಈ ಉತ್ಖನನ ತೋರಿಸಿಕೊಟ್ಟಿದೆ.

ಐತಿಹ್ಯದ ಪ್ರಕಾರ ವಿಜಯನಗರ ಸಾಮ್ರಾಜ್ಯಕ್ಕೂ ಮುನ್ನ ಇಲ್ಲಿ ಪಂಪಾಕ್ಷೇತ್ರವೆಂಬ ಒಂದು ಪಟ್ಟಣವಿತ್ತು. ಪಂಪಾಮಹಾತ್ಮೆಯಲ್ಲಿ ಹಂಪಿಯ ಪರಿಸರದ ಹಾಗೂ ಕ್ಷೇತ್ರ ಮಹಿಮೆಯನ್ನು ಸಾಂಗವಾಗಿ ಚಿತ್ರಿಸಲಾಗಿದೆ. ಹೇಮಕೂಟದ ಉತ್ತರಕ್ಕಿರುವ ವಿಪ್ರಕೂಟವೆಂಬ ಪರ್ವತದ ಬಳಿಯ ಸರೋವರದ (ಪಂಪಾ ಸರೋವರ)ದಡದಲ್ಲಿ ಪಂಪಾದೇವಿ ತಪಸ್ಸನ್ನಾಚರಿಸಿ, ಶಿವನನ್ನು ಮದುವೆಯಾಗುತ್ತಾಳೆ. ಆನಂತರ ಇದು ಪಂಪಾದೇವಿ, ಪಂಪಾವತಿ, ಪಂಪಾಕ್ಷೇತ್ರ, ಪಂಪಾಸರೋವರ, ಪಂಪಾಪುರ ಎಂಬ ಹೆಸರುಗಳಿಂದ ಖ್ಯಾತಿಯಾಯಿತು.

**ಪರಾಮರ್ಶಿಸಿದ ಗ್ರಂಥಗಳು**

1. K.T.Acharya - Indian food: A Historical Companion, oxford University Press, 1998.

2. Banga, I.(ed).- The City in Indian History : Urban Demography, Society and Politics,
Delhi, Manohar, 1991

3. A.L Basham - The wonder that was India. Picador Publisher, Indian ed. 2014

4. N.K Bose - Culture Zones of India" in culture and Society in India, Asia publishing
House 49

5. A. Sundara (Ed.) - Kannada Vishaya Vishvakosha Ithihasa mattu Puratatva

6.H. Tipperudraswamy - Karnataka Samskruti Sameekshe

7. Janapada Vishya Viswakosha Vol- I and II Prasaranga University of Mysore